72	ಕಾಚೇನಹಳ್ಳಿ	150.48
73	ಅಂಜನೇಯಪುರ	5.28
74	ಕಾರಂಜ	30.33
75	ಚುಲ್ಕಿನಾಲಾ	2.20
76	ವಾರಾಹಿ	211.26
77	ಕಳಸನಾಲಾ	25.00
78	ಬಂಡೂರಿನಾಲಾ	48.63
	ಒಟ್ಟು	**12287.87**

ರೇಷ್ಮೆ ಮಾರುಕಟ್ಟೆ

54(367) ಶ್ರೀ ಹ್ಯಾರಿಸ್ (ಶಾಂತಿನಗರ) ಮಾನ್ಯ ಕಾರ್ಮಿಕ ಹಾಗೂ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬೇಡಿಕೆ ಇರುವ ರೇಷ್ಮೆಯ ಪ್ರಮಾಣ ಮತ್ತು ಉತ್ಪಾದನಾ ಪ್ರಮಾಣ ಎಷ್ಟು;

ಆ) ಪ್ರಸ್ತುತ ಇರುವ ರೇಷ್ಮೆ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ರೇಷ್ಮೆ ನೇಕಾರರಿಗೆ ಒದಗಿಸಲು ಆಮದು ಮಾಡುವ ರೇಷ್ಮೆಗೆ ಕಸ್ಟಮ್ಸ್ ಶುಲ್ಕ ರದ್ದು ಮಾಡುವ ಹಾಗೂ ಸಹಕಾರಿ ಸಂಘಗಳ ಮೂಲಕ ರೇಷ್ಮೆ ವಿತರಣೆ ಮಾಡಲು ಸರ್ಕಾರ ತ್ವರಿತ ಕ್ರಮ ಜರುಗಿಸುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಹಾಗೂ ರೇಷ್ಮೆ ಸಚಿವರು)

ಅ) ಕರ್ನಾಟಕ ರಾಜ್ಯದ ವಾರ್ಷಿಕ ಕಚ್ಚಾ ರೇಷ್ಮೆಯ ಬೇಡಿಕೆ ಅಂದಾಜು 7000 ರಿಂದ 7500 ಮೆ.ಟನ್. ರಾಜ್ಯದ ರೇಷ್ಮೆ ಉತ್ಪಾದನಾ ಪ್ರಮಾಣ 7360 ಮೆ.ಟನ್.

ಆ) ನಮ್ಮ ರಾಜ್ಯದಲ್ಲಿ ಉತ್ಪಾದನೆಯಾದ ರೇಷ್ಮೆಯಲ್ಲಿ ಶೇ. 60 ರಷ್ಟು ಆಂತರಿಕವಾಗಿ ಬಳಕೆಯಾಗುತ್ತಿದ್ದು ಉಳಿದ ಶೇ. 40ರಷ್ಟು ಹೊರ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಗುಜರಾತ್ ಮತ್ತು ಉತ್ತರ ಪ್ರದೇಶಗಳ ಕೈಮಗ್ಗ

ನೇಕಾರಿಕೆ ಕೇಂದ್ರಗಳಿಗೆ ಹೋಗುತ್ತಿದೆ. ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಕಚ್ಚ ರೇಷ್ಮೆಯು ರಾಷ್ಟ್ರದ ಆಂತರಿಕ ಜವಳಿ ಬೇಡಿಕೆಗೆ ಅದರಲ್ಲೂ ಮುಖ್ಯವಾಗಿ ಕೈಮಗ್ಗಗಳಲ್ಲಿ ಬಳಕೆಯಾಗುತ್ತದೆ. ಮಹಿಳೆಯರ ಉಡುಪು, ಸೀರೆಗಳ ತಯಾರಿಕೆಯಲ್ಲಿ ಹೆಚ್ಚಾಗಿ ಸ್ಥಳೀಯ ರೇಷ್ಮೆಯನ್ನು ಬಳಸಲಾಗುತ್ತಿದೆ. ವಿದ್ಯುತ್ ಮಗ್ಗಗಳ ಬಳಕೆಗೆ ಒಂದೇ ಗುಣಮಟ್ಟದ ಹೆಚ್ಚಿನ ಪ್ರಮಾಣದ ರೇಷ್ಮೆ ಬೇಕಾಗುವ ಕಾರಣ ಈ ವಲಯವು ಹೆಚ್ಚಾಗಿ ಆಮದು ರೇಷ್ಮೆ ಮೇಲೆ ಅವಲಂಬಿತವಾಗಿದೆ.

ವಿದ್ಯುತ್ ಮಗ್ಗಗಳ ಬೇಡಿಕೆಯಾದ ಒಂದೇ ಗುಣಮಟ್ಟದ ಹೆಚ್ಚಿನ ಪ್ರಮಾಣದ ರೇಷ್ಮೆ ಉತ್ಪಾದಿಸಲು ಖಾಸಗಿ ವಲಯದಲ್ಲಿ 400 ತುದಿಗಳ ಸ್ವಯಂ ಚಾಲಿತ ದೊಡ್ಡ ಪ್ರಮಾಣದ ಒಂದು ರೀಲಿಂಗ್ ಘಟಕವನ್ನು ರಾಮನಗರದಲ್ಲಿ ಸ್ಥಾಪಿಸಲಾಗಿದೆ. ಇದೇ ಮಾದರಿಯ ಇನ್ನೂ 2 ಘಟಕಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಗುತ್ತಿದೆ.

ಅನೇಕ ಫಲಾನುಭವಿ ಆಧಾರಿತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಭಾಗೀದಾರರನ್ನು ಪ್ರೋತ್ಸಾಹಿಸುವ ಮೂಲಕ ರಾಜ್ಯದಲ್ಲಿ ರೇಷ್ಮೆ ಉತ್ಪಾದನೆಯನ್ನು 2011–12ನೇ ಸಾಲಿಗೆ 8500 ಮೆ.ಟನ್‌ಗಳಿಗೆ ಏರಿಸುವ ಗುರಿ ಹಮ್ಮಿಕೊಳ್ಳಲಾಗಿದೆ.

ಇ) ರೇಷ್ಮೆ ಆಮದು ನೀತಿ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿದೆ. ರೇಷ್ಮೆ ಆಮದು ಮಾಡಿಕೊಳ್ಳುವುದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಅದನ್ನು ಸಹಕಾರಿ ಸಂಘಗಳ ಮೂಲಕ ವಿತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಬಂಡವಾಳ ಹೂಡಿಕೆ

55(368) ಶ್ರೀ ಹ್ಯಾರಿಸ್ (ಶಾಂತಿನಗರ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ವಿವಿಧ ಉದ್ದಿಮೆಗಳ ಮೂಲಕ ಹೂಡಿಕೆ ಮಾಡಲಾದ ಒಟ್ಟು ಔದ್ಯಮಿಕ ಬಂಡವಾಳದ ಮೊತ್ತ ಎಷ್ಟು; ಅದರಲ್ಲಿ ಕರ್ನಾಟಕ ರಾಜ್ಯ ಮೂಲ ಉದ್ದಿಮೆದಾರರ ಬಂಡವಾಳದ ಮೊತ್ತ ಎಷ್ಟು;